# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 1244/2023

| ಸಿಡಬ್ಲ್ಯೂ | 6 | ಪಿಡಬ್ಲ್ಯೂ | 6 |
|---|---|---|---|

ಸಾಕ್ಷಿದಾರರ ಹೆಸರು : ಲೋಹಿತ

ತಂದೆಯ ಹೆಸರು : ಬಸ್ಸಣ್ಣ ಗೋಗಿ

ವಯಸ್ಸು : 53 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 18.12.2025

ಉದ್ಯೋಗ : ನಿರ್ವಾಹಕ

ವಾಸ ಸ್ಥಳ : ದಾವಣಗೆರೆ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ನೋಡಿರುತ್ತೇನೆ. 15.02.2023 ರಂದು ನಾನು ಬಸ್ಸಿನಲ್ಲಿ ಬರುವಾಗ ಸಿದ್ದಪ್ಪ ಚಾಲಕರಾಗಿದ್ದರು. ಮಂತ್ರಾಲಯ ದಿಂದ ಹರಿಹರಕ್ಕೆ ಹೋಗುವಾಗ ದುರ್ಗಾವತಿಯ ಹತ್ತಿರ ಚಾಲಕನೊಂದಿಗೆ ಸಾರ್ವಜನಿಕರು ಗಲಾಟೆ ಮಾಡಿರುತ್ತಾರೆ. ನೋಡಿಕೊಂಡು ಸೈಡಿಗೆ ತೆಗೆದುಕೊಂಡು ಬಾ ಅಂತಾ ಹೇಳಿರುತ್ತಾರೆ. ಬಸ್ಸಿನಲ್ಲಿ ಬಹಳ ಜನ ಇದ್ದರು. ಗಲಾಟೆ ಶಬ್ದ ಕೇಳಿ ನಾನು ಮುಂದೆ ಹೋದೆ. ಆಗ ಗಲಾಟೆ ಆಯಿತು. ನಾನು ಡೋರ ತೆಗೆದು ಕೆಳಕ್ಕೆ ಹೋದೆ. ಆಗ ಚಾಲಕ ಕೆಳಗೆ ಮಲಗಿಕೊಂಡಿದ್ದರು. ಯಾರು ಹೊಡೆದಿರುತ್ತಾರೆ ಅಂತಾ ನನಗೆ ಗೊತ್ತಾಗಲಿಲ್ಲ. ಗಲಾಟೆ ಪ್ರಾರಂಭ ಆಗಿದ್ದು ನನಗೆ ಗೊತ್ತಾಗಲಿಲ್ಲ. ಬೈಕ್ ನಲ್ಲಿ ಇಬ್ಬರು ಬಂದಿರುತ್ತಾರೆ. ಬೈಕನ್ನು ಬಸ್ಸಿಗೆ ಅಡ್ಡ ಹಾಕಿ ಗಲಾಟೆ ಮಾಡಿರುತ್ತಾರೆ. ಬಹಳ ಜನ ಮಾತನಾಡಿರುತ್ತಾರೆ. ಕೆಟ್ಟ ಕೆಟ್ಟ ಮಾತಿನಲ್ಲಿ ಮಾತನಾಡಿರುತ್ತಾರೆ. ಚಾಲಕನಿಗೆ ಕೆಳಗೆ ಬಿದ್ದ ನಂತರ ನಾನು ಅವನನ್ನು ನೋಡಿರುತ್ತೇನೆ. ಘಟನೆ ಬಗ್ಗೆ ನನಗೆ ಗೊತ್ತಿಲ್ಲಾ.

**(ಈ ವೇಳೆಯಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸದರಿ ಸಾಕ್ಷಿಯು ಪೋಲೀಸರಿಗೆ ಕೊಟ್ಟಿರುವುದಾಗಿ ಹೇಳಲಾದ ಹೇಳಿಕೆಯನ್ನು ಪರಿಶೀಲಿಸಲಾಯಿತು. ಅದರಲ್ಲಿರುವ ಸಂಗತಿಗಳಿಗೆ ವ್ಯತಿರಿಕ್ತವಾಗಿ ಸಾಕ್ಷಿದಾರರು ಪುರಾವೆ**

**ಹೇಳಿರುವುದರಿಂದ ಇವರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ಕಲ್ಪಿಸಲಾಗಿದೆ.)**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-**

ಆರೋಪಿತರು ಚಾ ಸಾ 1 ರವರ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾರೆ ಎಂದರೆ ಸರಿ. ಚಾಲಕ ಪ್ರಜ್ಞೆ ತಪ್ಪಿ ಬಿದಿದ್ದರು ಎಂದರೆ ಸರಿ. ಪ್ರಯಾಣಿಕರಿಗೆ ತೊಂದರೆ ಆಗುತ್ತದೆ ಅಂತಾ ನಾವು ವಾಹನ ತೆಗೆದುಕೊಂಡು ಹೋಗಿರುತ್ತೇವೆ. ನಂತರ ಹರಪನಹಳ್ಳಿ ಡಿಪೋಗೆ ಬಂದಿರುತ್ತೇವೆ. ಮೇಲಾಧಿಕಾರಿಗಳಿಗೆ ತಿಳಿಸಿದ ನಂತರ ಚಾಲಕ ದೂರು ನೀಡಿರುವ ವಿಚಾರ ನನಗೆ ಗೊತ್ತಾಗಿರುತ್ತದ.

**ಪಾಟೀ ಸವಾಲು ಆರೋಪಿ ಪರ ಶ್ರೀ ಗುಡದಯ್ಯ ವಕೀಲರಿಂದಃ-**

ನನಗೆ ಓದಲು ಬರೆಯಲು ಬರುತ್ತದೆ. ದೂರಿನಲ್ಲಿ ಬರೆದ ವಿಚಾರ ನನಗೆ ಗೊತ್ತಿದೆ. ದೂರು ಕೊಡಲು ನಾನು ಸಿದ್ದಪ್ಪ ಹಾಲೇಶಪ್ಪ ಹೋಗಿದ್ದೆವು. ದೂರನ್ನು ಹಾಲೇಶಪ್ಪ ಬರೆದಿರುತ್ತಾರೆ. ನಾನು ಪ್ರತಿ ದಿನ ಅದೇ ಮಾರ್ಗದಲ್ಲಿ ಬಸ್ಸನ್ನು ತೆಗೆದುಕೊಂಡು ಹೋಗುತ್ತೇವೆ ಎಂದರೆ ಸರಿ. ತೆಲಗಿಯಲ್ಲಿ ಮತ್ತು ದುರ್ಗಾವತಿಯಲ್ಲಿ ಸ್ಟಾಪ್ ಇದೆ ಎಂದರೆ ಗೊತ್ತಿಲ್ಲಾ. ಬಸ್ಸು ರಶ್ ಇದ್ದ ಕಾರಣ ದುರ್ಗಾವತಿಯಲ್ಲಿ ನಾವು ನಿಲ್ಲಿಸದೇ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಸ್ಟಾಪ್ ಕೊಡದ ವಿಚಾರದಲ್ಲಿ ನಮ್ಮನ್ನು ಪ್ರಶ್ನೆ ಮಾಡಿದರು ಎಂದರೆ ಸರಿಯಲ್ಲ. ಪ್ರಶ್ನೆ ವಾಡಿದ ಕಾರಣ ನಾನು ಚಾಲಕನೊಂದಿಗೆ ಸೇರಿ ಸುಳ್ಳು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದಿದಾರನೊಂದಿಗೆ ನನ್ನ ಒಳ್ಳೆಯ ಒಡನಾಟ ಇದೆ ಎಂದರೆ ಸರಿ. ಹೀಗಾಗಿ ಆರೋಪಿತರು ಕೆಲಸಕ್ಕೆ ಅಡ್ಡಿಪಡಿಸಿದರು ಅಂತಾ ಪಿರ್ಯಾದಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಆದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

**<u>ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ</u>**

ಸಿ ಸಿ ನಂಬರ 1244/2023

| | | | |
|---|---|---|---|
| ಸಿಡಬ್ಲ್ಯೂ | 7 | ಪಿಡಬ್ಲ್ಯೂ | 7 |

ಸಾಕ್ಷಿದಾರರ ಹೆಸರು : ಹಾಲೇಶ್

ತಂದೆಯ ಹೆಸರು : ನಿಂಗನಗೌಡ

ವಯಸ್ಸು : 38 18.12.2025

ಉದ್ಯೋಗ : ಕೆ ಎಸ್ ಆರ್ ಟಿ ಸಿ ಕಾನ್ಸಟೇಬಲ್

ವಾಸ ಸ್ಥಳ : ಹರಪನಹಳ್ಳಿ

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-</u>**

ಚಾ ಸಾ 1 ರವರು ನಮ್ಮ ಇಲಾಖೆಯಲ್ಲಿ ಚಾಲಕರಾಗಿರುತ್ತಾರೆ. ತೆಲಗಿ ಬಸ್ಸ ನಿಲ್ದಾಣದಲ್ಲಿ ಕೆಲವು ಜನರಿಂದ ಹಲ್ಲೆ ಆಗಿದೆ ಅಂತಾ ನನಗೆ ದೂರವಾಣಿಯ ಮುಖಾಂತರ ಹಿರಿಯಅ ಧಿಕಾರಿಗಳಿಂದ ವಿಷಯ ಗೊತ್ತಾಯಿತು. ನಾನು ಹಿರಿಯ ಅಧಿಕಾರಿಗಳ ನಿರ್ದೇಶನ ದಂತೆ ಪಿರ್ಯಾದಿಯನ್ನು ಕರೆದುಕೊಂಡು ಹೋಗಿ ದೂರು ಕೊಡಿಸಿರತ್ತೇನೆ. ದೂರನ್ನು ನಾನೇ ಬರೆದಿರುತ್ತೇನೆ. ದಸ್ತೂರು ಸಹಿ ಹಾಕಿರುತ್ತೇನೆ. ದೂರನ್ನು ನಿ ಪಿ 1 ಎಂದು, ಸಾಕ್ಷಿ ಸಹಿಯನ್ನು ನಿ ಪಿ 1(ಬಿ) ಎಂದು ಗುರುತಿಸಲಾಯಿತು. ಪೋಲೀಸರಿಗೆ ನಾನು ಹೇಳಿಕೆಯನ್ನು ಕೊಟ್ಟಿರುವುದಿಲ್ಲಾ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಗುಡದಯ್ಯ ವಕೀಲರಿಂದಃ-</u>**

ಭದ್ರತೆ ಜಾಗ್ರತೆ ಮತ್ತು ಮೇಲ್ವಿಚಾರಣೆ ನನ್ನ ಕರ್ತವ್ಯ. ಪಿರ್ಯಾದಿದಾರರು ಹೇಳಿದ ರೀತಿಯಲ್ಲಿ ದೂರು ನೀಡಿರುತ್ತೇನೆ ಎಂದರೆ ಸರಿ. ಗಲಾಟೆ ಬಗ್ಗೆ ನನಗೆ ಗೊತ್ತಿಲ್ಲಾ ಎಂದರೆ ಸರಿ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.) ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 1244/2023

| ಸಿಡಬ್ಲ್ಯೂ | 9 | ಪಿಡಬ್ಲ್ಯೂ | 8 |
|---|---|---|---|

ಸಾಕ್ಷಿದಾರರ ಹೆಸರು : ಕೆಂಚಪ್ಪ

ತಂದೆಯ ಹೆಸರು : ಮಂಚಣ್ಣ

ವಯಸ್ಸು : 38 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 18.12.2025

ಉದ್ಯೋಗ : ಚಾಲಕ

ವಾಸ ಸ್ಥಳ : ದುಗ್ಗಾವತಿ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ಆರೋಪಿತರು ನಮ್ಮ ಊರಿನವರು ಆಗಿರುತ್ತಾರೆ. ಅವರ ಪರಿಚಯ ನನಗೆ ಇರುತ್ತದೆ. ಈ ಪರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುದಿಲ್ಲಾ. ಯಾವುದೇ ಜಗಳವನ್ನು ನೋಡಿರುವುದಿಲ್ಲಾ. ನಾನು ಯಾವುದೇ ಜಗಳವನ್ನು ಬಿಡಿಸಿರುವುದಿಲ್ಲಾ.

**(ಈ ವೇಳೆಯಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸದರಿ ಸಾಕ್ಷಿಯು ಪೋಲೀಸರಿಗೆ ಕೊಟ್ಟಿರುವುದಾಗಿ ಹೇಳಲಾದ ಹೇಳಿಕೆಯನ್ನು ಪರಿಶೀಲಿಸಲಾಯಿತು. ಅದರಲ್ಲಿರುವ ಸಂಗತಿಗಳಿಗೆ ವ್ಯತಿರಿಕ್ತವಾಗಿ ಸಾಕ್ಷಿದಾರರು ಪುರಾವೆ ಹೇಳಿರುವುದರಿಂದ ಇವರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ಕಲ್ಪಿಸಲಾಗಿದೆ.)**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-**

ದಿನಾಂಕ 15.02.2023 ರಂದು ಸಂಜೆ 6.40 ರ ಸುಮಾರಿಗೆ ನಾನು ನಮ್ಮ ಊರಿನ ಬಸ್ಸ ನಿಲ್ದಾಣದಲ್ಲಿ ನಿಂತಿರುವಾಗ ಮಂತ್ರಾಲಯ ಹರಿಹರ ಮಾರ್ಗದ ಬಸ್ಸು ಬರುತ್ತಿದ್ದಂತೆ ಬಸ್ಸಿನ ಹಿಂದಿನಿಂದ ಓವರ್ ಟೇಕ್ ಮಾಡಿಕೊಂಡು ಬಂದ ಬೈಕ್ ಸವಾರನಾದ ಕನವರ ಮಹಾಂತೇಶ್ ಚಿಗಟೇರಿ ಬಸವರಾಜ ರವರು ಬಂದು ತಮ್ಮ ಬೈಕನ್ನು ಕೆ ಎಸ್ ಆರ್ ಟಿ ಸಿ ಬಸ್ಸಿಗೆ ಅಡ್ಡವಾಗಿ ನಿಲ್ಲಿಸಿ ಬಸ್ಸ ಚಾಲಕನ ಜೊತೆ ಏಕ ವಚನದಲ್ಲಿ ಮಾತನಾಡುತ್ತಾ ಆತನ ಕೊರಳ ಪಟ್ಟಿಯನ್ನು ಹಿಡಿದು ಎಳೆದು ಹೊಡೆಯುತ್ತಿರುವಾಗ ಬಸ್ಸ ನಿರ್ವಾಹಕ ಮತ್ತು ಪ್ರಯಾಣಿಕರು ಬಿಡಿಸಲು ಬಂದಾಗ ಹತ್ತಿರದಲ್ಲಿಯೇ ನಿಂತಿದ್ದ ಪೂಜಾರ ಕರಿಯಪ್ಪ ಎಂಬ ಚಾಲಕ ಅವಾಚ್ಯಶಬ್ದಗಳಿಂದ ಬೈದು ಯಾವ ಸೀಮೆ ಚಾಲಕಲೇ ನೀನು ನಾನು ಸಹ ಡ್ರೈವಿಂಗ್ ಮಾಡುತ್ತೇನೆ. ನಮ್ಮ ಊರಿನವರೊಂದಿಗೆ ಸರಿಯಾಗಿ ಮಾತನಾಡಲು ಬರುವುದಿಲ್ಲಾವೇ ಎಂದು

ಹೇಳಿ ಕೈಯಿಂದ ಬಲವಾಗಿ ಸಿದ್ದಣ್ಣನ ಮುಖಕ್ಕೆ ಗುದ್ದಿದ್ದರಿಂದ ಆತ ತಲೆ ತಿರಗಿ ಕೆಳಗೆ ಬಿದ್ದನು. ನಿರ್ವಾಹಕ ನಾನು ಅಲ್ಲಿ ಇದ್ದ ಜನರು ಸೇರಿ ಉಪಚರಿಸಿ ಬಸ್ಸಿನಲ್ಲಿ ಇದ್ದ ಪ್ರಯಾಣಿಕರಿಗೆ ತೊಂದರೆ ಆಗಬಾರದು ಎಂದು ಬಸ್ಸನ್ನು ಹರಿಹರಕ್ಕೆ ತೆಗೆದುಕೊಂಡು ಹೋದರು. ಚಾಲಕನಿಗೆ ಆರೋಪಿತರು ಅವಾಚ್ಯಶಬ್ದಗಳಿಂದ ಬೈದು ಕೈ ಕಾಲುಗಳಿಂದ ಹೊಡೆದು ನೋವನ್ನುಂಟು ಮಾಡಿ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದರ ಬಗ್ಗೆ ದೂರನ್ನು ನೀಡಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದು ನಾನು ಹೇಳಿಕೆಯನ್ನು ನೀಡಿರುತ್ತೇನ ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪಲು ನಿರಾಕರಿಸಿದ ಹೇಳಿಕೆಯನ್ನು ನಿ ಪಿ 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ- ಇಲ್ಲ.**

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.